**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:270/2019**

**ಪಿ.ಡಬ್ಲೂ:01 ಶ್ರೀಮತಿ ಕುಮಾರಿ**

**ಸಾಕ್ಷಿಯನ್ನು ದಿನಾಂಕಃ 09-04-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ಪ್ರತಿವಾದಿಯ ಪರ ಶ್ರೀ.ಎನ್ ಎಸ್ ವಕೀಲರಿಂದ**

1. ನಾನು ನನ್ನ ಹಿಂದಿನ ಪಾಟೀಸವಾಲಿನಲ್ಲಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ಸ್ವಾಮೀಜಿ ಎಂದು ಹೇಳಿದ್ದು ಅದರ ಅರ್ಥ ಸನ್ಯಾಸತ್ವ ಎಂದರೆ ಹೌದು. 1991 ಕ್ಕಿಂತ ಮೊದಲು ಮತ್ತು ನಂತರ ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ತಮ್ಮ ಯಾವುದೇ ವ್ಯವಹಾರದಲ್ಲಿ ಅವರ ತಂದೆ ಹೆಸರಾದ ಕೆ ವಿ ನರಸಿಂಹಯ್ಯ ಎಂದು ಬರೆಯುತ್ತಿದ್ದರು ಎಂದರೆ ಸರಿ. ನನ್ನ ಪ್ರಕಾರ ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ಸನ್ಯಾಸತ್ವ ಪಡೆದು ಅವರು ಸಿವಿಲ್ ಡೆತ್ ಆಗಿರುತ್ತಾರೆ ಎಂಬುವುದನ್ನು ತೋರಿಸುವ ದಾಖಲೆಗಳೇನಾದರೂ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿಯು ಅವರ ಮರಣ ಪ್ರಮಾಣ ಪತ್ರದಲ್ಲಿ ಅವರು ಸ್ವಾಮೀಜಿ ಆಗಿ ಮರಣ ಹೊಂದಿರುತ್ತಾರೆ ಎಂದು ನಮೂದಿದೆ ಎನ್ನುತ್ತಾರೆ. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರ ಮರಣ ಪ್ರಮಾಣ ಪತ್ರದಲ್ಲಿ ಅವರ ತಂದೆ ಮತ್ತು ತಾಯಿ ಹೆಸರು ನಮೂದಿದೆ ಎಂದರೆ ಹೌದು.

2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರ ಹೆಸರು ನಮೂದಿದೆ ಎಂದರೆ ಹೌದು ಎಂದು ಗುರುತಿಸಿ ನನ್ನ ಹೆಸರು ಕೂಡ ಸದರಿ ದಾಖಲೆಯಲ್ಲಿ ಇದೆ ಎನ್ನುತ್ತಾರೆ. ಸದರಿ ದಾಖಲೆಯು ಟ್ರಸ್ಟ್ ಡೀಡ್ ನ ದೃಡೀಕೃತ ಪ್ರತಿ ಆಗಿದ್ದು ಅದನ್ನು ಈಗ ನಿಡಿ1 ಎಂದು ಗುರುತಿಸಲಾಯಿತು. ಸದರಿ ನಿಡಿ1 ರಲ್ಲಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರ ಹೆಸರಿನ ಜೊತೆ ತಂದೆ ಹೆಸರಾದ ಎಸ್ ಎನ್ ನರಸಿಂಹಯ್ಯ ಎಂದು ನಮೂದಿದೆ ಎಂದರೆ ಸರಿ. ಸದರಿ ನಿಡಿ 1 ರಲ್ಲಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರ ಹೆಂಡತಿ ಆದ ರುಕ್ಮಣಿ ರವರ ಹೆಸರು ಕೂಡ ಇದ್ದು ಅವರ ಗಂಡನ ಹೆಸರನ್ನು ಕೂಡ ನಮೂದು ಮಾಡಿರುತ್ತಾರೆ ಎಂದರೆ ಸರಿ.

3. ನಂತರ ದಿಃ19.03.2011 ರಲ್ಲಿ ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ಒಂದು ಟ್ರಸ್ ಡೀಡ್ ನ್ನು ಮಾಡಿದ್ದು ಅದರಲ್ಲೂ ಸಹ ತಂದೆಯ ಹೆಸರಾದ ಎಸ್ ಎನ್ ನರಸಿಂಹಯ್ಯ ಎಂದು ನಮೂದಿದೆ ಎಂದರೆ ಸರಿ. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರ ತಮ್ಮ ಸಹಿಯನ್ನು ಕಮಲ ಸಾಂಭವ ಎಂದು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ಸಾಂಭವಶಿವಮೂರ್ತಿ ಸ್ವಾಮೀಜಿ ಎಂದು ಸಹಿ ಮಾಡುತ್ತಿದ್ದರು ಎನ್ನುತ್ತಾರೆ. ಸದರಿ ನಿಡಿ1 ರಂತೆ ಟ್ರಸ್ಟಿಗೆ ಯಾವುದಾದರೂ ಆಸ್ತಿಯನ್ನು ನೀಡಿದ್ದಾರಾ ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದ ನಿಡಿ1 ದಾಖಲೆಯಂತೆ ಟ್ರಸ್ಟ್

ಚಾಲ್ತಿಯಲ್ಲಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರ ಸಹಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆದ ಕಾರಣ ಸದರಿ ದಾಖಲೆಯನ್ನು ಗುರುತಿಸಲಾಗುವುದಿಲ್ಲ. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು 2018 ನೇ ಸಾಲಿನಲ್ಲಿ ವೆಂಕಟೇಶ್ವರ್ ಎಜುಕೇಶನ್ ಸೊಸೈಟಿಯನ್ನು ನಡೆಸುತ್ತಿದ್ದರು ಎಂದರೆ ಹೌದು.

4. ಸಾಕ್ಷಿಗೆ ಒಂದು ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ತೋರಿಸಲಾಗಿ ಅದು ಸದರಿ ವೆಂಕಟೇಶ್ವರ ಎಜುಕೇಶನ್ ಸೊಸೈಟಿಗೆ ಸಂಬಂದಿಸಿದ ದಾಖಲೆ ಎಂದು ನೋಡಿ ಗುರುತಿಸಿದ್ದು ಅದನ್ನು ಈಗ ನಿಡಿ2 ಎಂದು ಗುರುತಿಸಲಾಯಿತು. ಸದರಿ ನಿಡಿ2 ಕ್ಕೆ ಸಂಬಂದ ಪಟ್ಟಂತೆ ವೆಂಕಟೇಶ್ವರ ಎಜುಕೇಶನ್ ಸೊಸೈಟಿರವರು ಅದನ್ನು ಮಾರಾಟ ಮಾಡಿರುತ್ತಾರೆ. ನಾನು ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ಸನ್ಯಾಸತ್ವ ತೆಗೆದುಕೊಂಡಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರಿಗೆ ಸ್ವಾಮೀಜಿ ಎಂದು ಕರೆಯಲು ಇಷ್ಟ ಇರುವ ಕಾರಣ ಅವರು ಅದನ್ನು ಉಪಯೋಗಿಸುತ್ತಿದ್ದು ನಾನು ಹೇಳಿದಂತೆ ಅವರು ಸನ್ಯಾಸತ್ವವನ್ನು ಪಡೆದು ಅಂತಹ ಜೀವನವನ್ನು ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ.

5. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ನನ್ನ ವಾದ ಪತ್ರದಲ್ಲಿ ಹೇಳಿದಂತೆ ಸನ್ಯಾಸತ್ವವನ್ನು ಪಡೆದು ತಮ್ಮ ಹೆಂಡತಿ, ಮಕ್ಕಳಿಂದ ಸಂಬಂದ ಇಟ್ಟುಕೊಂಡಿರಲಿಲ್ಲ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ಪ್ರಕಾರ ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು 2000 ನೇ ಸಾಲಿನಲ್ಲಿ ತಮ್ಮ ಎಲ್ಲಾ ಹಕ್ಕನ್ನು ಬಿಟ್ಟುಕೊಟ್ಟು ಬಿಡುಗಡೆ ಪತ್ರವನ್ನು ಮಾಡಿರುತ್ತಾರೆ. ಸದರಿ ನನ್ನ ಪ್ರಕಾರ ಆದ ಬಿಡುಗಡೆ ಪತ್ರದಲ್ಲಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ನಾನು ಹೇಳಿದಂತೆ ಅವರ ಹೆಂಡತಿ ಮತ್ತು ಕುಟುಂಬದಿಂದ ಸನ್ಯಾಸತ್ವ ಪಡೆದ ಕಾರಣ ಸಂಬಂದ ಇರುವುದಿಲ್ಲ ಎಂಬ ಬಗ್ಗೆ ಬರೆದಿರುತ್ತಾರಾ ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಅವರು ಸನ್ಯಾಸತ್ವ ಪಡೆದ ಕಾರಣ ಸದರಿ ದಾಖಲೆ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ತಮ್ಮ ಜೀವಿತಾ ಕಾಲದಲ್ಲಿ ಅವರು ನಾನು ಹೇಳಿದಂತೆ ಸನ್ಯಾಸತ್ವವನ್ನು ತೆಗೆದುಕೊಂಡಿರುವ ಬಗ್ಗೆ ಹೇಳಿರುತ್ತಾರಾ ಎಂದರೆ ಹೇಳಿರುತ್ತಾರೆ. ಸದರಿ ಸನ್ಯಾಸತ್ವವನ್ನು ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ಹೇಳಿರುವುದಕ್ಕೆ ಪೂರಕವಾದ ದಾಖಲೆಗಳು ನನ್ನ ಬಳಿ ಇರುತ್ತವೆ. ಸದರಿ ದಾಖಲೆಗಳನ್ನು ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

6. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ತಮ್ಮ ಜೀವಿತಾಕಾಲದಲ್ಲಿ ದೇವಸ್ಥಾನಕ್ಕೆ ಸಂಬಂದ ಪಟ್ಟ ದಾವೆಗಳನ್ನು ಅವರ ಹೆಸರಿನಲ್ಲಿ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ಹೌದು ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿ ಸ್ವಾಮೀಜಿ ಆಗಿ ನಡೆಸುತ್ತಿದ್ದರು ಎನ್ನುತ್ತಾರೆ. ಸದರಿ ನ್ಯಾಯಾಲಯದಲ್ಲಿ ಆದಂತಹ

ಪ್ರಕಾರಣಗಳಲ್ಲಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ಸನ್ಯಾಸತ್ವವನ್ನು ಅವರು ಸ್ವೀರಿಕಸಿರುವ ಬಗ್ಗೆ ನಮೂದು ಮಾಡಿರುತ್ತಾರಾ ಎಂದರೆ ಮಾಡಿರುತ್ತಾರೆ. ಸದರಿ ವಿಚಾರವನ್ನು ತೋರಿಸುವ ದಾಖಲೆಗಳು ನನ್ನ ಬಳಿ ಇರುತ್ತದೆ. ಸದರಿ ಕಮಲ ಸಾಂಭವ ಅಲಿಯಾಸ್ ಸಾಂಭಶಿವಮೂರ್ತಿರವರು ತಮ್ಮ ಜೀವಿತಾಕಾಲದಲ್ಲಿ ಮೇಲೆ ಹೇಳಿದಂತೆ ಸನ್ಯಾಸತ್ವದ ಬಗ್ಗೆ ಎಲ್ಲಿಯೂ ಸಹ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**